Akashvani : Bangalore
National Bulletin In Kannada
06.04.2025 / 7.35 am
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

<><*<><>*><>

ಮುಖ್ಯಾಂಶಗಳು

೧. ವಕ್ಫ್ ತಿದ್ದುಪಡಿ ಮಸೂದೆ-೨೦೨೫ ಕ್ಕೆ ರಾಷ್ಟ್ರಪತಿ ಅಂಕಿತ

೨. ದೇಶಾದ್ಯಂತ ಇಂದು ರಾಮನವಮಿ ಆಚರಣೆ- ರಾಷ್ಟ್ರಪತಿ ಸೇರಿದಂತೆ ಗಣ್ಯರ ಶುಭಾಶಯ

೩. ತಮಿಳುನಾಡಿನಲ್ಲಿ ಇಂದು ಆಧುನೀಕರಿಸಿದ ಪಂಬನ್ ರೈಲು ಸೇತುವೆ ಉದ್ಘಾಟಿಸಲಿರುವ ಪ್ರಧಾನಿ ನರೇಂದ್ರ ಮೋದಿ

೪. ವಿಶ್ವಕಪ್ ಬಾಕ್ಸಿಂಗ್; ಪುರುಷರ ೭೦ ಕೆಜಿ ವಿಭಾಗದಲ್ಲಿ ಭಾರತದ ಹಿತೇಶ್ ಗುಲಿಯಾಗೆ ಚಿನ್ನದ ಪದಕ

೫. ಐಪಿಎಲ್ ಟಿ-೨೦ ಕ್ರಿಕೆಟ್; ಪಂಜಾಬ್ ಕಿಂಗ್ಸ್ ವಿರುದ್ಧ ರಾಜಸ್ಥಾನ ರಾಯಲ್ಸ್‌ಗೆ ೫೦ ರನ್‌ಗಳ ಜಯ

<><*<><>*><>

ಕಳೆದ ಶುಕ್ರವಾರ ಸಂಸತ್ತು ಅಂಗೀಕರಿಸಿದ ವಕ್ಫ್ ತಿದ್ದುಪಡಿ ಮಸೂದೆ ೨೦೨೫ ಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಅಂಕಿತ ಹಾಕಿದ್ದಾರೆ. ರಾಷ್ಟ್ರಪತಿಗಳ ಒಪ್ಪಿಗೆಯ ನಂತರ, ಇದು ಈಗ ಕಾನೂನಾಗಿ ಮಾರ್ಪಟ್ಟಿದೆ. ಲೋಕಸಭೆಯಲ್ಲಿ ಕಳೆದ ಗುರುವಾರ ೨೮೮ ಸದಸ್ಯರು ಮಸೂದೆಯ ಪರ ಮತ್ತು ೨೩೨ ಸದಸ್ಯರು ಇದನ್ನು ವಿರೋಧಿಸಿ ಮತ ಚಲಾಯಿಸಿದರು. ರಾಜ್ಯಸಭೆ ಕಳೆದ ಶುಕ್ರವಾರ ಮಸೂದೆಯನ್ನು ಅಂಗೀಕರಿಸಿತು, ೧೨೮ ಸದಸ್ಯರು ಮಸೂದೆಯ ಪರವಾಗಿ ಮತ್ತು ೯೫ ಸದಸ್ಯರು ಅದನ್ನು ವಿರೋಧಿಸಿದರು. ಮುಸಲ್ಮಾನ್ ವಕ್ಫ್ ರದ್ದತಿ ಮಸೂದೆ ೨೦೨೫ ಕ್ಕೂ ರಾಷ್ಟ್ರಪತಿಗಳ ಅಂಕಿತ ದೊರೆತಿದೆ.

<><*<><>*><>

ನಾಳೆಯಿಂದ ಇದೇ ೧೦ರವರೆಗೆ ರಾಷ್ಟ್ರಪತಿ ದ್ರೌಪದಿ ಮುರ್ಮು, ಪೋರ್ಚುಗಲ್ ಹಾಗೂ ಸ್ಲೋವಾಕಿಯಾ ದೇಶಗಳಿಗೆ ಭೇಟಿ ನೀಡಲಿದ್ದಾರೆ. ಪೋರ್ಚುಗಲ್ ಭೇಟಿಯ ವೇಳೆ ಅವರು, ತಮ್ಮ

ಸಹವರ್ತಿ ಅಧ್ಯಕ್ಷ ಮಾರ್ಸೆಲೊ ರೆಬೆಲೊ ಡೇ ಸೌಸಾ ಅವರೊಂದಿಗೆ ನಿಯೋಗಮಟ್ಟದ ಮಾತುಕತೆ ನಡೆಸಲಿದ್ದಾರೆ. ಇದೇ ವೇಳೆ ಅವರು, ಪೋರ್ಚುಗಲ್ ಪ್ರಧಾನಿ ಲೂಯಿಸ್ ಮಾಂಟೆನೆಗ್ರೊ ಅವರನ್ನು ಭೇಟಿಯಾಗಲಿದ್ದಾರೆ. ಸ್ಲೋವಾಕಿಯಾದಲ್ಲಿ ರಾಷ್ಟ್ರಪತಿ ಅವರು, ಸ್ಲೋವಾಕ್ ಅಧ್ಯಕ್ಷ ಪೀಟರ್ ಪೆಲೆಗ್ರಿನಿ ಮತ್ತು ಪ್ರಧಾನಿ ರಾಬರ್ಟ್ ಫಿಕೊ ಅವರನ್ನು ಭೇಟಿಯಾಗಲಿದ್ದಾರೆ.

<><*<><>*><>

ಚೈತ್ರ ಮಾಸದ ೯ನೇ ದಿನವಾದ ದೇಶಾದ್ಯಂತ ಇಂದು ಶ್ರೀ ರಾಮನವಮಿ ಆಚರಿಸಲಾಗುತ್ತಿದೆ. ಈ ಹಬ್ಬ ಭಗವಾನ್ ಶ್ರೀರಾಮ ದೇವರ ಜನ್ಮದಿನದ ಆಚರಣೆಯಾಗಿದೆ. ರಾಮನವಮಿ ಅಂಗವಾಗಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, ದೇಶದ ಸಮಸ್ತ ಜನತೆಗೆ ಶುಭಾಶಯ ಕೋರಿದ್ದಾರೆ. ಭಗವಾನ್ ರಾಮ ದೇವರ ಜೀವನದ ಪಯಣ ಸತ್ಯ, ಧರ್ಮ ಹಾಗೂ ನೈತಿಕ ಮೌಲ್ಯಕ್ಕೆ ಪ್ರತೀಕವಾಗಿದೆ. ಮಾನವ ಜನಾಂಗಕ್ಕೆ ಬದ್ಧತೆ ಹಾಗೂ ನಿಸ್ವಾರ್ಥದಿಂದ ಸೇವೆ ಸಲ್ಲಿಸುವ ಸಂದೇಶವನ್ನು ರಾಮನವಮಿ ಉತ್ಸವ ನೀಡುತ್ತದೆ ಎಂದು ರಾಷ್ಟ್ರಪತಿಯವರು ತಿಳಿಸಿದ್ದಾರೆ.

<><*<><>*><>

ಅಯೋಧ್ಯೆಯಲ್ಲಿ, ಭಗವಾನ್ ಶ್ರೀ ರಾಮನ ಜನ್ಮೋತ್ಸವವನ್ನು ಆಚರಿಸಲು ಪ್ರಪಂಚದ ಮೂಲೆ ಮೂಲೆಗಳಿಂದ ಭಕ್ತರು ಆಗಮಿಸುತ್ತಿದ್ದಾರೆ. ರಾಮ ನವಮಿಗೆ ಆಗಮಿಸುವ ಭಕ್ತರಿಗೆ ಸಕಲ ವಿಶೇಷ ವ್ಯವಸ್ಥೆಗಳನ್ನು ಕಲ್ಪಿಸಲಾಗಿದೆ. ರಾಮನಗರಿ ಅಯೋಧ್ಯೆಯು ಭಗವಾನ್ ರಾಮನ ಜನ್ಮೋತ್ಸವವನ್ನು ಆಚರಿಸಲು ಸಜ್ಜಾಗಿದೆ. ಈ ವಿಶೇಷ ಸಂದರ್ಭದಲ್ಲಿ ರಾಮಲಾಲ್ಲಾಗೆ ಪ್ರಾರ್ಥನೆ ಸಲ್ಲಿಸಲು ದೇಶ ಮತ್ತು ಪ್ರಪಂಚದಾದ್ಯಂತದ ಭಕ್ತರು ಅಯೋಧ್ಯೆಯನ್ನು ತಲುಪುತ್ತಿದ್ದಾರೆ. ಶ್ರೀ ರಾಮ ಜನ್ಮಭೂಮಿ ದೇವಾಲಯವನ್ನು ವಿಶೇಷ ಹೂವುಗಳಿಂದ ಅಲಂಕರಿಸಲಾಗಿದೆ. ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್ ಅವರು ರಾಮ ನವಮಿಯಂದು ರಾಮಲಾಲಾಗೆ ೫೬ ವಿಶಿಷ್ಟ ಬಗೆಯ ನೈವೇದ್ಯಗಳನ್ನು ಅರ್ಪಿಸಲಾಗುವುದು ಎಂದು ಮಾಹಿತಿ ನೀಡಿದರು. ಮಧ್ಯಾಹ್ನ ೧೨:೦೦ ಗಂಟೆಗೆ ರಾಮಲಾಲಾ ಅವರ ಹಣೆಯ ಮೇಲೆ ವಿಶೇಷ ಸೂರ್ಯ ತಿಲಕವನ್ನು ಹಾಕಲಾಗುತ್ತದೆ, ಇದು ಸುಮಾರು ೪ ನಿಮಿಷಗಳ ಕಾಲ ಇರುತ್ತದೆ., ಇದನ್ನು ಪ್ರಪಂಚದಾದ್ಯಂತ ನೇರ ಪ್ರಸಾರ ಮಾಡಲಾಗುವುದು. ಈ ಬಾರಿ, ಸರಯು ನದಿಯ ನೀರನ್ನು ಡ್ರೋನ್ ಮೂಲಕ ಭಕ್ತರ ಮೇಲೆ ಸಿಂಪಡಿಸಲಾಗುವುದು, ಮತ್ತು ಸಂಜೆ ದೀಪೋತ್ಸವವನ್ನು ಸಹ ಆಯೋಜಿಸಲಾಗುವುದು. ಭಕ್ತರ ಬೃಹತ್ ಜನಸಂದಣಿಯನ್ನು ಗಮನದಲ್ಲಿಟ್ಟುಕೊಂಡು, ಆಡಳಿತ ಮಂಡಳಿಯು ಕಟ್ಟುನಿಟ್ಟಿನ ಭದ್ರತಾ ವ್ಯವಸ್ಥೆಗಳನ್ನು ಮಾಡಿದೆ. ಸಾಮಾನ್ಯ ಭಕ್ತರ ಅನುಕೂಲಕ್ಕಾಗಿ,

ರಾಮ ಮಂದಿರಕ್ಕೆ ಎಲ್ಲಾ ವಿಶೇಷ ಪಾಸ್‌ಗಳನ್ನು ಬೆಳಿಗ್ಗೆ ೬:೦೦ ರಿಂದ ಮಧ್ಯಾಹ್ನ ೧೨:೦೦ ರವರೆಗೆ ರದ್ದುಗೊಳಿಸಲಾಗಿದೆ.

<><*<><>*><>

ರಾಮನವಮಿಯ ಶುಭ ಸಂದರ್ಭದಲ್ಲಿಂದು ತಮಿಳುನಾಡಿನ ರಾಮೇಶ್ವರಂಗೆ ಸಂಪರ್ಕ ಒದಗಿಸುವ ಆಧುನೀಕರಿಸಿದ ನೂತನ ಪಂಬನ್ ರೈಲು ಸೇತುವೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ಇಂದು ಉದ್ಘಾಟಿಸಲಿದ್ದಾರೆ. ಎರಡು ಕಿಲೋಮೀಟರ್ ಉದ್ದದ ದೇಶದ ಮೊದಲ ಊರ್ಧ್ವ ಲಿಫ್ಟ್ ಸೇತುವೆ ಇದಾಗಿದೆ.  ಪ್ರಧಾನಿ ನರೇಂದ್ರ ಮೋದಿ ಇಂದು ಶ್ರೀಲಂಕಾ ಪ್ರವಾಸ ಕೊನೆಗೊಳಿಸಿ, ಭಾರತಕ್ಕೆ ಮರಳಲಿದ್ದಾರೆ.

<><*<><>*><>

ಪ್ರಧಾನಿ ನರೇಂದ್ರ ಮೋದಿ ಇಂದು ಶ್ರೀಲಂಕಾದ ಅನುರಾಧಪುರಕ್ಕೆ ಪ್ರಯಾಣಿಸಲಿದ್ದು, ಶ್ರೀಲಂಕಾ ಅಧ್ಯಕ್ಷ ಅನುರ ಕುಮಾರ ದಿಸಾನಾಯಕ ಅವರೊಂದಿಗೆ ಭಾರತ ಅನುದಾನಿತ ರೈಲ್ವೆ ಯೋಜನೆಗಳನ್ನು ಉದ್ಘಾಟಿಸಲಿದ್ದಾರೆ. ಶ್ರೀಲಂಕಾದ ಉತ್ತರ ಭಾಗದಿಂದ ರಾಜಧಾನಿ ಕೊಲಂಬೊಗೆ ಸುರಕ್ಷಿತ, ತ್ವರಿತ ಮತ್ತು ಆರಾಮದಾಯಕ ಪ್ರಯಾಣವನ್ನು ಒದಗಿಸುವ ಶ್ರೀಲಂಕಾದೊಳಗಿನ ಸಂಪರ್ಕಕ್ಕೆ ಈ ಯೋಜನೆಗಳು ನಿರ್ಣಾಯಕವಾಗಿವೆ. ನಿನ್ನೆ ಪ್ರಧಾನಿ ನರೇಂದ್ರ ಮೋದಿ ಮತ್ತು ಅಧ್ಯಕ್ಷ ದಿಸ್ಸಾನಾಯಕೆ ಅವರು ಎರಡೂ ರಾಷ್ಟ್ರಗಳ ನಡುವಿನ ದ್ವಿಪಕ್ಷೀಯ ಸಂಬಂಧಗಳನ್ನು ಮತ್ತಷ್ಟು ಬಲಪಡಿಸುವ ಬಗ್ಗೆ ವ್ಯಾಪಕ ಮಾತುಕತೆ ನಡೆಸಿದರು. ಇದೇ ವೇಳೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಶ್ರೀಲಂಕಾದ ಅತ್ಯುನ್ನತ ನಾಗರಿಕ ಗೌರವಗಳಲ್ಲಿ ಒಂದಾದ ಮಿತ್ರ ವಿಭೂಷಣ ಪ್ರಶಸ್ತಿಯನ್ನು ನೀಡಲಾಯಿತು.

<><*<><>*><>

ಭಾರತೀಯ ಜನತಾ ಪಕ್ಷ ಇಂದು ತನ್ನ ಸಂಸ್ಥಾಪನಾ ದಿನವನ್ನು ಆಚರಿಸುತ್ತಿದೆ. ಇದರ ಅಂಗವಾಗಿ ಕೇಂದ್ರ ಸಚಿವ ಹಾಗೂ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ನವದೆಹಲಿಯ ಬಿಜೆಪಿ ಪ್ರಧಾನ ಕಚೇರಿಯಲ್ಲಿ ಪಕ್ಷದ ಧ್ವಜಾರೋಹಣ ಮಾಡಲಿದ್ದಾರೆ. ಈ ಸಂದರ್ಭದಲ್ಲಿ ಅವರು, ಪಕ್ಷದ ಬೂತ್‌ಮಟ್ಟದ ಕಾರ್ಯಕರ್ತರೊಂದಿಗೆ ಸಂವಾದ ನಡೆಸಲಿದ್ದು, ರಾಜಧಾನಿಯಲ್ಲಿರುವ ಪಕ್ಷದ ಹಿರಿಯ ಕಾರ್ಯಕರ್ತರ ಮನೆಗಳಿಗೆ ಭೇಟಿ ನೀಡಲಿದ್ದಾರೆ.

<><*<><>*><>

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು, ಇಂದು ಜಮ್ಮು ಮತ್ತು ಕಾಶ್ಮೀರಕ್ಕೆ ಭೇಟಿ ನೀಡಿ, ಈ ಪ್ರದೇಶದ ಭದ್ರತಾ ಪರಿಸ್ಥಿತಿಯನ್ನು ಪರಿಶೀಲಿಸಲಿದ್ದಾರೆ ಮತ್ತು ಭದ್ರತಾ ಸಿಬ್ಬಂದಿಯೊಂದಿಗೆ ಸಂವಾದ ನಡೆಸಲಿದ್ದಾರೆ. ೩ ದಿನಗಳ ಭೇಟಿಯ ಸಮಯದಲ್ಲಿ ಸಚಿವರು, ಜಮ್ಮುವಿನಲ್ಲಿ ಬಿಜೆಪಿ ಶಾಸಕರನ್ನು ಭೇಟಿ ಮಾಡಲಿದ್ದಾರೆ, ಜೊತೆಗೆ ಏಕೀಕೃತ ಪ್ರಧಾನ ಕಚೇರಿಯ ಎರಡು ನಿರ್ಣಾಯಕ ಪ್ರತ್ಯೇಕ ಭದ್ರತಾ ಪರಿಶೀಲನಾ ಸಭೆಗಳು ಹಾಗೂ ಅಮರನಾಥ ಯಾತ್ರೆಯ ವಾರ್ಷಿಕ ತೀರ್ಥಯಾತ್ರೆ ಸಭೆಯ ಅಧ್ಯಕ್ಷತೆ ವಹಿಸಲಿದ್ದಾರೆ. ಭಯೋತ್ಪಾದನಾ ನಿಗ್ರಹ ಕಾರ್ಯಾಚರಣೆಗಳು, ಗಡಿಯಾಚೆಗಿನ ಒಳನುಸುಳುವಿಕೆ ಪ್ರಯತ್ನಗಳು ಮತ್ತು ಜಮ್ಮು ಮತ್ತು ಕಾಶ್ಮೀರದಲ್ಲಿನ ಒಟ್ಟಾರೆ ಭದ್ರತಾ ವ್ಯವಸ್ಥೆಯ ಬಗ್ಗೆ ಚರ್ಚೆನಡೆಸುವ  ನಿರೀಕ್ಷೆಯಿದೆ. ಏತನ್ಮಧ್ಯೆ, ಅವರು ಜಮ್ಮು ಮತ್ತು ಕಾಶ್ಮೀರದ ಅಭಿವೃದ್ಧಿಗೆ ಪೂರಕವಾಗಲಿರುವ ಶ್ರೀನಗರದಿಂದ ಹಲವಾರು ಬಹು-ಕೋಟಿ ಯೋಜನೆಗಳಿಗೆ ವರ್ಚುವಲ್ ಮೂಲಕ ಉದ್ಘಾಟನೆ ಹಾಗೂ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ.

<><*<><>*><>

'ಒಂದು ರಾಷ್ಟ್ರ, ಒಂದು ಚುನಾವಣೆ' ವ್ಯವಸ್ಥೆಯನ್ನು ಜಾರಿಗೆ ಬಂದರೆ ಭಾರತ, ಬೆಳವಣಿಗೆ ದರದಲ್ಲಿ ಶೇಕಡ ೧.೫ ರಷ್ಟು ವೃದ್ಧಿ ಸಾಧಿಸಲಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.  ಚೆನ್ನೈನಲ್ಲಿ ನಡೆದ ವಿಚಾರ ಸಂಕಿರಣವೊಂದರಲ್ಲಿ ಮಾತನಾಡಿದ ಅವರು, ದೇಶದ ಜಿಡಿಪಿ ಕೂಡ ೪.೫ ಲಕ್ಷ ಕೋಟಿ ರೂಪಾಯಿಗಳಷ್ಟು ಏರಿಕೆಯಾಗಲಿದೆ. ೨೦೧೯ ರ ಲೋಕಸಭಾ ಚುನಾವಣೆಗಳಿಗೆ ಅಂದಾಜು ವೆಚ್ಚ ಒಂದು ಲಕ್ಷ ಕೋಟಿ ರೂಪಾಯಿಗಳಾಗಿದ್ದು, ಏಕಕಾಲದಲ್ಲಿ ಚುನಾವಣೆ ನಡೆಸುವುದರಿಂದ ೧೨ ಸಾವಿರ ಕೋಟಿ ರೂಪಾಯಿ ಉಳಿತಾಯವಾಗಲಿದೆ ಎಂದು ಸಚಿವರು ತಿಳಿಸಿದ್ದಾರೆ. ಒಂದೇ ಬಾರಿಗೆ ಚುನಾವಣೆ ನಡೆದರೆ, ಮತದಾನ ಪ್ರಮಾಣದಲ್ಲೂ ಏರಿಕೆ ಕಾಣಬಹುದಾಗಿದೆ. ಈ ಯೋಜನೆ ತಕ್ಷಣಕ್ಕೆ ಜಾರಿಗೆ ಬರದಿದ್ದರೂ, ರಾಷ್ಟ್ರಪತಿ ದ್ರೌಪದಿ ಮುರ್ಮು ಏಕಕಾಲದಲ್ಲಿ ಚುನಾವಣೆ ನಡೆಸುವ ಪ್ರಕ್ರಿಯೆಯನ್ನು ೨೦೨೯ರ ನಂತರವೇ ಪ್ರಾರಂಭಿಸಲಿದ್ದಾರೆ ಎಂಬುದನ್ನು ವಿರೋಧ ಪಕ್ಷಗಳು ಅರ್ಥಮಾಡಿಕೊಳ್ಳಬೇಕು ಎಂದು ಹಣಕಾಸು ಸಚಿವರು ಹೇಳಿದ್ದಾರೆ.

<><*<><>*><>

ಹಿಂದೂ ಮಹಾಸಾಗರದಲ್ಲಿ ಶಾಂತಿ ಮತ್ತು ಸ್ಥಿರತೆ ಕಾಪಾಡುವಲ್ಲಿ ಭಾರತೀಯ ನೌಕಾಪಡೆ ಮಹತ್ವದ ಪಾತ್ರ ವಹಿಸುತ್ತಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದ್ದಾರೆ.  ಅವರು, ಕರ್ನಾಟಕದ ಕಾರವಾರದ ಐಎನ್‌ಎಸ್ ನೌಕಾನೆಲೆಯಲ್ಲಿ ।ಔಽ ಸಾಗರ ಕಾರ್ಯಾಚರಣೆಗೆ ನಿನ್ನೆ ಹಸಿರು ನಿಶಾನೆ ತೋರಿ ಮಾತನಾಡಿದರು.

<><*<><>*><>

ಮ್ಯಾನ್ಮಾರ್‌ನಲ್ಲಿ ಭೂಕಂಪದಿಂದ ಸಾವನ್ನಪ್ಪಿದವರ ಸಂಖ್ಯೆ ೩ ಸಾವಿರದ ೩೫೪ ಕ್ಕೆ ಏರಿಕೆಯಾಗಿದೆ, ೨೦೦ ಕ್ಕೂ ಹೆಚ್ಚು ಜನರು ಇನ್ನೂ ನಾಪತ್ತೆಯಾಗಿದ್ದಾರೆ ಎಂದು ವರದಿಯಾಗಿದೆ. ಭೂಕಂಪದ ಕೇಂದ್ರಬಿಂದುವಿನ ಬಳಿಯ ಮಂಡಲೆಗೆ ಆಗಮಿಸಿದ ವಿಶ್ವಸಂಸ್ಥೆಯ ನೆರವು ಮುಖ್ಯಸ್ಥ ಟಾಮ್ ಫ್ಲೆಚರ್, ಮಾನವೀಯ ಮತ್ತು ಸಮುದಾಯ ಸಂಸ್ಥೆಗಳ ಪರಿಹಾರ ಪ್ರಯತ್ನಗಳನ್ನು ಶ್ಲಾಘಿಸಿದರು. ವಿಶ್ವಸಂಸ್ಥೆ ಸಹಾಯ ಮಾಡಲು ಸಿದ್ಧವಿದ್ದು, ಜಗತ್ತು ಮ್ಯಾನ್ಮಾರ್ ಜನರ ನೆರವಿಗೆ ಸಹಾಯ ಹಸ್ತ ನೀಡುವಂತೆ ಮನವಿ ಮಾಡಿದ್ದಾರೆ.

<><*<><>*><>

ಬ್ರಿಜಿಲ್‌ನಲ್ಲಿ ನಡೆಯುತ್ತಿರುವ ವಿಶ್ವಕಪ್ ಬಾಕ್ಸಿಂಗ್-೨೦೨೫ ಪಂದ್ಯಾವಳಿಯ ಪುರುಷರ ೭೦ ಕೆಜಿ ವಿಭಾಗದಲ್ಲಿ ಭಾರತ ಹಿತೇಶ್ ಗುಲಿಯಾ ಚಿನ್ನದ ಪದಕ ಗೆದ್ದಿದ್ದಾರೆ. ಇಂದು ಬೆಳಗಿನ ಜಾವ ನಡೆದ ಫೈನಲ್ ಪಂದ್ಯದಲ್ಲಿ ಹಿತೇಶ್, ಇಂಗ್ಲೆಂಡ್‌ನ ಒಡೆಲ್ ಕಮಾರಾ ಅವರನ್ನು ಪರಾಭವಗೊಳಿಸಿದರು. ಈ ನಡುವೆ ಪುರುಷರ ೬೫ ಕೆಜಿ ವಿಭಾಗದಲ್ಲಿ ಭಾರತದ ಅಭಿನಾಶ್ ಜಮ್‌ವಾಲ್ ಬೆಳ್ಳಿ ಪದಕ ಗಳಿಸಿದರು. ಫೈನಲ್‌ನಲ್ಲಿ ಅವರು, ಬ್ರೆಜಿಲ್‌ನ ಯೂರಿರೈಸ್ ವಿರುದ್ಧ ೦-೫ ಅಂಕಗಳ ಅಂತರದಲ್ಲಿ ಸೋಲನುಭವಿಸಿದರು.

<><*<><>*><>

ಚಂಡೀಗಢದ ಮಹಾರಾಜ ಯಾದವೀಂದ್ರ ಸಿಂಗ್ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ಕಳೆದ ರಾತ್ರಿ ನಡೆದ ಐಪಿಎಲ್ ಟಿ-೨೦ ಕ್ರಿಕೆಟ್ ಪಂದ್ಯದಲ್ಲಿ ರಾಜಸ್ಥಾನ ರಾಯಲ್ಸ್ ತಂಡ ಪಂಜಾಬ್ ಕಿಂಗ್ಸ್ ತಂಡವನ್ನು ೫೦ ರನ್‌ಗಳಿಂದ ಪರಾಭವಗೊಳಿಸಿದೆ. ಮೊದಲು ಬ್ಯಾಟಿಂಗ್ ಮಾಡಿದ ರಾಜಸ್ಥಾನ ರಾಯಲ್ಸ್ ತಂಡವು ನಿಗದಿತ ೨೦ ಓವರ್‌ಗಳಲ್ಲಿ ನಾಲ್ಕು ವಿಕೆಟ್ ನಷ್ಟಕ್ಕೆ ೨೦೫ ರನ್ ಗಳಿಸಿತು, ರಾಜಸ್ಥಾನ ಪರ ಯಶಸ್ವಿ ಜೈಸ್ವಾಲ್ ೬೭ ರನ್ ಗಳಿಸಿದರು. ಪಂಜಾಬ್ ಕಿಂಗ್ಸ್ ಪರ ಲಾಕಿ ಫರ್ಗುಸನ್ ಎರಡು ವಿಕೆಟ್ ಪಡೆದರು. ಇದಕ್ಕೆ ಉತ್ತರವಾಗಿ, ಪಂಜಾಬ್ ಕಿಂಗ್ಸ್, ನಿಗದಿತ ೨೦ ಓವರ್‌ಗಳಲ್ಲಿ ಒಂಬತ್ತು ವಿಕೆಟ್ ನಷ್ಟಕ್ಕೆ ೧೫೫ ರನ್ ಗಳಿಸಲಷ್ಟೇ ಶಕ್ತವಾಯಿತು. ಪಂಜಾಬ್ ಪರ ನೆಹಾಲ್ ವಾಧೇರಾ ೬೨ ರನ್ ಗಳಿಸಿದರು. ರಾಜಸ್ಥಾನ ರಾಯಲ್ಸ್ ಪರ ಜೋಫ್ರಾ ಆರ್ಚರ್ ಮೂರು ವಿಕೆಟ್‌ಗಳನ್ನು ಕಬಳಿಸಿದರು. ಇದಕ್ಕೂ ಮುನ್ನ ಚೆನ್ನೈನ ಎಂ.ಎ.ಚಿದಂಬರಂ ಕ್ರೀಡಾಂಗಣದಲ್ಲಿ ನಡೆದ ದಿನದ ಮೊದಲ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಡೆಲ್ಲಿ ಕ್ಯಾಪಿಟಲ್ಸ್ ತಂಡ ೨೫ ರನ್‌ಗಳಿಂದ ಮಣಿಸಿತು. ಹೈದರಾಬಾದ್‌ನ ರಾಜೀವ್ ಗಾಂಧಿ ಕ್ರೀಡಾಂಗಣದಲ್ಲಿಂದು ನಡೆಯಲಿರುವ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ತಂಡ ಗುಜರಾತ್ ಟೈಟಾನ್ಸ್ ತಂಡವನ್ನು ಎದುರಿಸಲಿದೆ. ಪಂದ್ಯ ರಾತ್ರಿ ೭:೩೦ ಕ್ಕೆ ಪ್ರಾರಂಭವಾಗಲಿದೆ.

<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>

<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೧೨ ಕ್ಕೆ <>*><>